ಶ್ರೀ ಎಂ. ನಾರಾಯಣಸ್ವಾಮಿ : ಪ್ರಶ್ನೋತ್ತರದ ಜೊತೆ ಕಾಲಿಂಗ್ ಅಟೆನ್ಷನ್ ಕೂಡ ಇದೆ.

ಅಧ್ಯಕ್ಷರು : ಅದರೆ ಜೊತೆ ಆಗುವುದಿಲ್ಲ. ಸಪರೇಟಾಗಿ ಆಗಬೇಕು. ಈಗ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು ಇವೆ. ಅದು ಬೇಕಾಗಿಲ್ಲ ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ : ಅವಿಶ್ವಾಸ ನಿರ್ಣಯ ಇದೆ

ಶ್ರೀ ವಾಟಾಳ್ ನಾಗರಾಜ್ : ಎಲ್ಲವೂ ಮುಂದೆ ಹೋಗಲಿ. ಅವಿಶ್ವಾಸ ನಿರ್ಣಯವನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು : ಈಗ ಅವಿಶ್ವಾಸ ನಿರ್ಣಯದ ಗೊತ್ತುವಳಿ ಇದೆ.

ಶ್ರೀ ಬಿ.ಪಿ.ಬಿ. ಬನ್ನಿಕೋಡ್ : ನಾವು ಒಪ್ಪಿದ್ದೇವೆ. ನಾಯಕರು ಹಾಗೂ ಪ್ರತಿಪಕ್ಷದ ನಾಯಕರೂ ಒಪ್ಪಿದ್ದಾರೆ. ತಾವು ಇದರ ಬಗ್ಗೆ ಒಪ್ಪಿಗೆ ಕೊಡಬೇಕು.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಜವಾಬು ಕೊಟ್ಟಿದ್ದಾರೆ, ನಾಯಕರೂ ಕೊಟ್ಟಿದ್ದಾರೆ. ತಾವು ಕೂಡ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ತಾವು ರೂಲಿಂಗ್ ಕೊಟ್ಟಿಲ್ಲ. ಇದರ ಬಗ್ಗೆ ಅನುಮತಿ ಕೊಟ್ಟಿದ್ದಾವೆಂದು ಹೇಳಿ.

(ಗೊಂದಲ)

ಅಧ್ಯಕ್ಷರು; ತಾವು ಇಟ್ಟಿರತಕ್ಕ ವಿಶ್ವಾಸಕ್ಕೆ ನಾನು ಋಣಿಯಾಗಿದ್ದೇನೆ. ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ ನಂತರ ಒಂದು ತೀರ್ಮಾನಕ್ಕೆ ಬರುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಕೃಷ್ಣ ಸಂಧಾನ ಯಶಸ್ವಿ ಆಗಿದೆ.

ಅಧ್ಯಕ್ಷರು; ಕೃಷ್ಣ ಸಂಧಾನದಿಂದ ಈಗ ಅವಿಶ್ವಾಸ ನಿರ್ಣಯಕ್ಕೆ ಹೋಗೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ; ಇದೂ ಸಹ ಯಶಸ್ವಿ ಆಗಲಿ. ಇದು ಯಶಸ್ವಿ ಆಗುವ ಹಾಗೆ ತಾವು ತೀರ್ಮಾನ ಮಾಡಿ.

ಅಧ್ಯಕ್ಷರು; ಕೃಷ್ಣ ಜನ್ಮಾಷ್ಟಮಿ ದಿವಸ ಇಷ್ಟು ಅನಾಹುತ ಆಗಬಾರದಿತ್ತು.

ಶ್ರೀ ಅಜೀಜ್ ಸೇಠ್; ಕೃಷ್ಣನನ್ನು ಇಟ್ಟುಕೊಂಡು ಆಗಬಾರದಿತ್ತು.

ಶ್ರೀ ವಾಟಾಳ್ ನಾಗರಾಜ್;ಎಲ್ಲಾ ಸರಿ ಹೋಯಿತು.

ಅಧ್ಯಕ್ಷರು; ಈಗ ನಾವೆಲ್ಲಾ ನಗುತ್ತಾ ಮನೆಗಳಿಗೆ ಹೋಗುತ್ತಿದ್ದೇವೆ.

ಪ್ರಸ್ತಾವನೆ

"ಶ್ರೀ ಎಸ್. ಬಂಗಾರಪ್ಪ(ಮುಖ್ಯಮಂತ್ರಿ)ರವರ ನೇತೃತ್ವದ ಮಂತ್ರಿ ಮಂಡಲದಲ್ಲಿ ಅವಿಶ್ವಾಸ ನಿರ್ಣಯದ ಮಂಡನೆ ಮತ್ತು ಚರ್ಚೆ"

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಸ್ತಾವನೆಯನ್ನು ಈ ಸಭೆಯ ಮುಂದೆ ಮಂಡಿಸುವುದಕ್ಕೆ ತಮ್ಮ ಅನುಮತಿಯನ್ನು ಬೇಡುತ್ತಿದ್ದೇನೆ. ಪ್ರಸ್ತಾವನೆ ಹೀಗಿದೆ. "ಈ ಸದನವು ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) ರವರ ನೇತೃತ್ವದ ಮಂತ್ರಿಮಂಡಲದಲ್ಲಿ ಅವಿಶ್ವಾಸವನ್ನು ಸೂಚಿಸುತ್ತೆ". ನಾನು ಪ್ರಸ್ತಾವನೆಯ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಪರಿಣಾಮಗಳ ಕಲ್ಪನೆ ನನಗೆ ಇದೆ. ಅವಿಶ್ವಾಸ ನಿರ್ಣಯದ ಮೂಲಸ್ವರೂಪವನ್ನು ತಿಳಿದುಕೊಳ್ಳುವುದಕ್ಕೆ

ಪ್ರಯತ್ನ ಮಾಡಿದ್ದೇನೆ. ಎಲ್ಲದಕ್ಕಿಂತ ಮೇಲಾಗಿ ಇದರ ಅಗತ್ಯಗಳು ಏನು ಎನ್ನತಕ್ಕದ್ದನ್ನು ಕೂಡ ನಾನು ಈ ಸಭೆಯಲ್ಲಿ ವಿಸ್ತಾರವಾಗಿ ಪ್ರಸ್ತಾಪ ಮಾಡಬೇಕಾದ್ದಿದೆ. ಆದ್ದರಿಂದ ತಾವು ಅನುಮತಿಯನ್ನು ಕೊಡುವುದಾದರೆ, ಈ ಸಭೆಯನ್ನು ಮುಂದುವರೆಸಿ ನಾಳೆ ಇದನ್ನು ತೆಗೆದುಕೊಳ್ಳಬಹುದು ಎಂದು ನನ್ನ ಸಲಹೆ. ಈ ಸಲಹೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಈಗ ಸಭೆಯು ಮುಂದುವರಿದು ನಾಳೆ ಬೆಳಿಗ್ಗೆ 9 ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6.40 ಗಂಟೆಗೆ ಮುಕ್ತಾಯವಾಗಿ ಮತ್ತೆ ದಿನಾಂಕ 3ನೇ ಸೆಪ್ಟೆಂಬರ್ 1991ರಂದು ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)